ISSN : 2320-0391

साहित्य और संस्कृति

# सृजन ಸೃಜನ

हिंदी-कन्नड त्रैमासिक पत्रिका

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

अक्टूबर-दिसम्बर २०१९



Scanned by CamScanner

## ಪರಿವಿಡಿ


೧. ಹೀಗೇಕೆ ? • ಮೂಲ ಹಿಂದಿ ಪ್ರೊ : ಸಾಹೇಬಹುಸೇನ ಜಹಾಗೀರದಾರ ಕನ್ನಡಕ್ಕೆ ಪ್ರೊ : ಎಸ್.ಟಿ.ಮೇರವಾಡೆ. ३.೨

೨. ಕುವೆಂಪು–ಬೇಂದ್ರೆಯವರ ದೃಷ್ಟಿಯಲ್ಲಿ ಕವಿ–ಕಾವ್ಯ • ಪ್ರೊ. ಬಿ. ಬಿ. ಡೆಂಗನವರ ೩೪

೩. ಹೃದಯ ಅರಳುವ ಶಿಕ್ಷಣ • ಡಾ. ವಿಷ್ಣು ಎಂ. ಶಿಂದೆ ೩೯

೪. ಸ್ವಾತಂತ್ರ್ಯ ಹೋರಾಟದಲ್ಲಿ ವೀರ ಸಿಂಧೂರ ಲಕ್ಷ್ಮಣನ ಪಾತ್ರ • ಡಾ. ಸಿ. ಎಂ. ತಳವಾರ ೪೩

೫. ತಿಂಥಣಿ ಮೌನೇಶ್ವರ ಕುರಿತ ಸಾಹಿತ್ಯ : ಒಂದು ಅವಲೋಕನ • ಡಾ. ಎಂ. ಎಸ್. ಮಾಗಣಗೇರಿ ೪೮

೬ ಕರ್ನಾಟಕ ಕರಾವಳಿಯ ಬ್ರಾಹ್ಮಣ ಪರಂಪರೆಯಲ್ಲಿ 'ಪತಿತ ಬ್ರಾಹ್ಮಣ್ಯ'ದ ಸಮಸ್ಯೆ • ಮಂಜುನಾಥ ಕರಬ ೫೩

೭ ಶರಣ ಸಾಹಿತ್ಯದಲ್ಲಿ ವಚನಕಾರರ ಪಾತ್ರ ಮತ್ತು ಜನ ಜಾಗೃತಿ • ಡಾ. ಲಿಂಗರಾಜ ಸಿ. ಮುಳ್ಳಳ್ಳಿ ೬೦

೮. ಅನುಪಮಾ ನಿರಂಜನರ ಆತ್ಮಕಥನಗಳಲ್ಲಿ ಸ್ತ್ರೀ ಸಂವೇದನೆಗಳು • ದೇವಿಂದ್ರಮ್ಮ ಶರಣಪ್ಪ ೬೫


### ಅಂಕಣ – ಎಂಟು


೯. ನಾನು ನಾನಾಗಿ ಇರಬಹುದು • ಡಾ. ಆರ್. ವಿ. ಪಾಟೀಲ ೬೯


■■



Scanned by CamScanner

# ಕುವೆಂಪು–ಬೇಂದ್ರೆಯವರ ದೃಷ್ಟಿಯಲ್ಲಿ ಕವಿ–ಕಾವ್ಯ

• ಪ್ರೊ. ಬಿ. ಬಿ. ರಂಗಸ್ವಾಮಿ

ಕನ್ನಡ ನವೋದಯ ಸಾಹಿತ್ಯದಲ್ಲಿ 'ಕಾಡಿನ ಕವಿಯಾಗಿ' ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ರಾಷ್ಟ್ರಕವಿ ಕುವೆಂಪುರವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃಷಿ ಮಾಡಿದವರು.

ಬೇಂದ್ರೆ ದೇಶಿ ಪ್ರತಿಭೆಯ ಅನನ್ಯ ಸಾಹಿತಿಯಾಗಿದ್ದಾರೆ. ಅವರ ಕಾವ್ಯದ ಉದ್ದಕ್ಕೂ ಗೋಚರಿಸುವ ಸತ್ಯ ದೇಶಿಯ ನೆಲೆಯಲ್ಲಿರುವ ವಾಸ್ತವದ ಸಂಗತಿ. ಯಾವುದೋ ನೆಲದ, ಯಾವಾಗಲೋ ನಡೆದಿರಬಹುದಾದ ಇತಿಹಾಸವನ್ನಾಗಲಿ, ಕಲ್ಪನೆಯಾಗಲಿ, ಹೇಳುವುದಕ್ಕೆ ತೊಡಗಿಸಿಕೊಳ್ಳದೆಯೇ ಕಾವ್ಯದ ಮೂಲ ದ್ರವ್ಯವನ್ನಾಗಿ ದೇಶಿಯತೆಯನ್ನು ಜಾನಪದ ಗತ್ತನ್ನು, ವಾಸ್ತವಿಯತೆಯನ್ನು ಬದುಕಿನ ನೆಲೆ –ಬೆಲೆ, ರೀತಿ ಪ್ರೀತಿಗಳನ್ನು ಜೀವ–ಜಗತ್ತು ಸಾಮಾನ್ಯ ಅಸಾಮಾನ್ಯರೆನ್ನದೆಯೇ 'ಜೀವನ'ವನ್ನು ಕ್ರಿಯಾತ್ಮಕವಾಗಿ ಕಂಡುಂಡವರು ಬೇಂದ್ರೆ ಇದನ್ನೇ ಕಾವ್ಯವನ್ನಾಗಿಸಿದವರು ಆ ಮೂಲಕ 'ಜನವಾಣಿ'ಯಾದವರು.

ಕುವೆಂಪು "ಯಾವಾತ್ಮನು ತನ್ನ ಪುಣ್ಯವಶದಿಂದ ಅಂತರಾತ್ಮನ ದಿವ್ಯವಾಣಿಯ ಮಂಜುಳಗಾನಕ್ಕೆ ನಿಮಿತ್ಯ ಮಾತ್ರವಾದ ಕೋಳಲಾಗುವನೋ ಆತನೇ ಕವಿ" ಎಂದು ರವೀಂದ್ರನಾಥ ಟ್ಯಾಗೋರರ ಮಾತಿನಿಂದ ಸ್ಫೂರ್ತಿಪಡೆದು "ಕವಿ" ಯಾರು ಎಂಬುದನ್ನು ಗುರುತಿಸುತ್ತಾರೆ. ಕುವೆಂಪು ದೃಷ್ಟಿಯಲ್ಲಿ "ಕವಿ" ಭಾರತೀಯ ಕಾವ್ಯ ಪರಂಪರೆಯಿಂದಲೇ ಬೆಳೆದು ಬಂದವನು ಯಾವ ದೇಶದ ಕವಿಯಾಗಲಿ ತನ್ನ ಜನತೆಯ ಪ್ರಾಚೀನ ಸಂಸ್ಕೃತಿಯ ನೆಲದಲ್ಲಿಯೇ ಮೊಳೆತು ಬೇರುಬಿಟ್ಟು ಬೆಳೆಯುತ್ತಾನೆ. ಭಾರತೀಯನಾದ ಕವಿಗೆ, ವೇದ, ಉಪನಿಷತ್ತು, ಭಗವದ್ಗೀತೆ, ಷಡ್ದರ್ಶನಗಳು, ರಾಮಾಯಣ, ಮಹಾಭಾರತಾದಿ ಮಹಾಕಾವ್ಯಗಳು, ಪುರಾಣಗಳು–ಇತ್ಯಾದಿ ಭಾರತೀಯ ದರ್ಶನ ಸಾಹಿತ್ಯಗಳು ಅವನ ಸಂಸ್ಕಾರ ಕೋಶಗಳನ್ನು ಸಿದ್ಧಪಡಿಸುವ ಭಿತ್ತಿಯಾಗಿ ಪರಿಣಮಿಸುತ್ತವೆ. ಕುವೆಂಪುರವರ ಈ ಮೇಲಿನ ಮಾತುಗಳು ಅವರ ಮೇಲೆ ಭಾರತೀಯ ಆರ್ಷೇಯ ಪರಂಪರೆಯ ಪ್ರಭಾವ ಆಗಿರುವುದನ್ನು ತಿಳಿಸುತ್ತದೆ.

ಕವಿಯಲ್ಲಿ ಶ್ರದ್ಧೆ ಇರಬೇಕು ಆತನಲ್ಲಿರುವ ಕಲ್ಪನೆ, ವ್ಯುತ್ಪತ್ತಿ ಪ್ರತಿಭೆಗಳೆಲ್ಲಾ ಪ್ರಜ್ವಲಿಸುವುದು ನಿರಂತರ ಪರಿಶ್ರಮದಿಂದ ಸತತ ಅಭ್ಯಾಸದಿಂದ ಮಾತ್ರ ಸಾಧ್ಯ ಎಂದಿದ್ದಾರೆ.

ನಮ್ಮ ಪ್ರಾಚೀನ ಅಲಂಕಾರಿಕರಾದ ವಾಮನ, ದಂಡಿ, ನಾಗವರ್ಮ, ಭಾಮಹ ಮುಂತಾದವರೆಲ್ಲ ಇದೇ ಅಭಿಮತವನ್ನು ಹೊಂದಿದವರು. ನಾಗವರ್ಮ ತನ್ನ ಕಾವ್ಯಾವಲೋಕನದಲ್ಲಿ "ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಕಾರಣಂ"ಎಂದಿದ್ದಾನೆ.

ಕುವೆಂಪು ಇಂತಹ ಸಮಯದಲ್ಲಿ ಪೂರ್ಣದೃಷ್ಟಿ ದರ್ಶನ, ರಸತಪಸ್ಸು ಮುಂತಾದ ಪದ ಪ್ರಯೋಗ ಮಾಡಿ ಕವಿಯಲ್ಲಿ ಈ ಎಲ್ಲ ಗುಣಗಳು ಇರಬೇಕು ಎಂದು ಹೇಳುತ್ತಾರೆ.

ಕುವೆಂಪು ತಮ್ಮ ಕಾವ್ಯ ಮಿಮಾಂಸೆಯ ಜಿಜ್ಞಾಸೆಯ ಧಾರೆಗಳಲ್ಲಿ ಕವಿ, ಕವಿಯ ಅರ್ಹತೆ, ಜವಾಬ್ದಾರಿಗಳು, ಕವಿತೆ, ಕವಿತೆಗೂ ಈ ಜಗತ್ತಿಗೂ ಇರುವ ಸಂಬಂಧ ನಂಟು ಮುಂತಾದ ಪ್ರಶ್ನೆಗಳನ್ನು ಎತ್ತಿ ಕಾವ್ಯ ಸ್ವರೂಪವನ್ನು



Scanned by CamScanner

ವಿಶ್ಲೇಷಿಸುವ ಸಂದರ್ಭದಲ್ಲಿ ಚರ್ಚಿಸುತ್ತಾರೆ. ಈ ವಿಚಾರವಾಗಿ ಭಾರತೀಯ ಪ್ರಾಚೀನ ಅಲಂಕಾರಿಕರು ಅಷ್ಟೇ ಅಲ್ಲ ಕನ್ನಡ ನವೋದಯ ಸಂದರ್ಭದ ಕಾವ್ಯ ಚಿಂತಕರು, ಅಂತೆಯೇ ಪಾಶ್ಚಾತ್ಯ ಕಾವ್ಯ ವಿಮರ್ಶಕರು ಬಹಳಷ್ಟು ಚಿಂತನೆಯನ್ನು ನಡೆಸಿದ್ದಾರೆ.

'ದ್ರೌಪದಿಯ ಶ್ರೀಮುಡಿ', 'ರಸೋವೈಸ', 'ವಿಭೂತಿ ಪೂಜೆ', ಕಾವ್ಯ ಮಿಮೊಂಸೆಗೆಂದೇ ಮೀಸಲಾಗಿರುವಂತಹ ಕುವೆಂಪುರವರ ಕೃತಿಗಳಾಗಿವೆ. ಇದರಲ್ಲಿ ಕವಿ–ಕಾವ್ಯ ಜಗತ್ತನ್ನು ಕುರಿತು ಚಿಂತಿಸಿದ್ದಾರೆ. ಭಾರತೀಯ ಕಾವ್ಯ ಮಿಮಾಂಸಕರ ಸ್ಪೂರ್ತಿ ಮಾರ್ಗದರ್ಶನ ಜೊತೆಗೆ ಪಾಶ್ಚಾತ್ಯ ಚಿಂತಕರ ಅಭಿಪ್ರಾಯಗಳನ್ನು ತೌಲನಿಕವಾಗಿ ನೋಡಿ ಕುವೆಂಪು ತಮ್ಮದೇ ಆದ ನಿರ್ಧಾರಕ್ಕೆ ಬಂದು ನಿಲ್ಲುತ್ತಾರೆ.

ಪ್ರಾಚ್ಯ–ಪಾಶ್ಚಾತ್ಯಗಳೆಂಬ ಭೇದವಿಲ್ಲದೆ ಎಲ್ಲ ತತ್ತ್ವವಿಚಾರಗಳ ಚಿರ ಸಾರಾಂಶಗಳನ್ನು ವಿಜ್ಞಾನದ ನವನವಾವಿಷ್ಕಾರಗಳನ್ನು ಸರ್ವಮತಗಳ ಸಮನ್ವಯ ದೃಷ್ಟಿಯನ್ನೂ ಜೀರ್ಣಿಸಿಕೊಂಡಿರಬೇಕು ಎನ್ನುತ್ತಾರೆ.

ಮಹಾಕವಿಯ ಪ್ರತಿಭೆಯ ಅಮೃತ ಸ್ಪರ್ಶ ದೊರಕೊಂಡೊಡನೆ ಹಳೆಯದೆಂದು ಸಮೆದ ನಾಣ್ಯವೆಂದು, ನಿರ್ಜೀವವೆಂದು ಪರಿಗಣಿತವಾಗಿರುವ ಮೃತರೂಪಕಗಳೆಲ್ಲ ಆಂಜನೇಯನಂತೆ ಅಂಬರಗಾಮಿಯಾಗುತ್ತದೆ. ತ್ರಿವಿಕ್ರಮನಂತೆ ಭೂಮಿ ಆಕಾಶವನ್ನೇ ಆಕ್ರಮಿಸುತ್ತದೆ. ಇಂತಹ ಕವಿ ಯಾವತ್ತಿದ್ದರೂ ಗೌರವಕ್ಕೊಳಗಾಗುತ್ತಾನೆ ಮಾನ್ಯನೆನಿಸಿ ಕೊಳ್ಳುತ್ತಾನೆ.

ಕವಿಯಾದವನು 'ಹಿಂದು, ಇಂದು, ಮುಂದು'ಗಳನ್ನು ಅಂದರೆ ಭೂತ, ವರ್ತಮಾನ, ಭವಿಷತ್‌ಗಳನ್ನು ಏಕಕಾಲದಲ್ಲಿ ಗ್ರಹಿಸಬೇಕು. ಈ ಪ್ರಜ್ಞೆಯನ್ನು ' ಪೂರ್ಣದೃಷ್ಟಿ' ಎಂದು ಕರೆದಿದ್ದಾರೆ, ಹೀಗೆ ನೋಡಬಲ್ಲ ಕವಿಯನ್ನು 'ದೃಷ್ಟಾರ' ಎಂದು ಕರೆಯುತ್ತಾರೆ.

ಬೇಂದ್ರೆ ಕೂಡಾ ಕವಿಯನ್ನು ದೃಷ್ಟಾರ ಎಂದು ಕರೆದು ಅದರಲ್ಲಿ ಸೃಷ್ಟಾರಕವಿ, ದೃಷ್ಟಾರ ಕವಿ ಎಂಬ ಎರಡು ವರ್ಗವನ್ನು ಮಾಡಿದ್ದಾರೆ. ಕವಿಯ ಸೃಷ್ಟಿಗೂ ಅದನ್ನು ಪೂರ್ಣದೃಷ್ಟಿಯಿಂದ ದರ್ಶಿಸುವ ಪೂರ್ಣಯೋಗಿಗೂ ಇರುವ ಸಂಬಂಧಕ್ಕೆ ಹೋಲಿಸುತ್ತಾರೆ. ಇಂತಹ ಹೋಲಿಕೆ ಫಲಪ್ರದವಾಗುವಲ್ಲಿ ಸಹೃದಯನ ಸಹಕಾರ ಅಗತ್ಯ. ಆತನಲ್ಲಿ 'ಪೂರ್ಣದೃಷ್ಟಿ' ಇರಬೇಕು, ಕಾವ್ಯಮಿಮಾಂಸಕರೂ ಕವಿಯೂ ಆದ ಕುವೆಂಪು ಕವಿಯ ಜವಾಬ್ದಾರಿಯ ಬಗ್ಗೆ ಹೆಚ್ಚಿನ ಕಾಳಜಿವಹಿಸಿದ್ದಾರೆ.

ಕುವೆಂಪು ಕಾವ್ಯವನ್ನು ರಚಿಸುತ್ತ ಆ ಕಾವ್ಯಗಳ ಕುರಿತಾಗಿ ದೀರ್ಘವಾದ ಅಷ್ಟೇ ಸೂಕ್ಷ್ಮವಾದ ಮೂಲಭೂತ ಅಂಶಗಳತ್ತ ಗಮನವನ್ನು ಹರಿಸುತ್ತಾರೆ. 'ಭಾರತೀಯ ಕಾವ್ಯಚಿಂತನೆ, ಪಾಶ್ಚಾತ್ಯ ಕಾವ್ಯ ವಿಮರ್ಶೆ, ತತ್ತ್ವಶಾಸ್ತ್ರ ಇಷ್ಟೇ ಅಲ್ಲ, ಆಧುನಿಕ ಮನೋವಿಜ್ಞಾನದ ಬೆಳಕಿನಲ್ಲಿಯೂ ವೀಕ್ಷಿಸುತ್ತಾರೆ.

ಕವಿ ಕುವೆಂಪುರವರು ಇಂಗ್ಲೀಷಕವಿ ವರ್ಡ್ಸವರ್ತ್ ಅವರ ಪ್ರಭಾವಕೊಳಗಾಗಿದ್ದಾರೆ. ಹಸುರು ನೆಲದಿಂದ ಬುಗ್ಗೆಯಂತೆ ನಿರಂತರವಾಗಿ ನಿರಾಯಾಸವಾಗಿ ಚಿಮ್ಮಿ ಹೊಮ್ಮುವ ಭಾವನಾತ್ಮಕವಾದ ಲಲಿತಪದಗಳೆ ಮನೋಹರವಾದ ಇಂಪಾದ ವಸಂತ ನೃತ್ಯವೆ ಸುಗ್ಗಿಯ ಕುಣಿತವೆ ನಿಜವಾದ ಕವಿತೆ ಎಂದು ನುಡಿದಿದ್ದಾರೆ.

"ಕವಿಪ್ರತಿಭೆಯ ಸಂಜೀವಿನಿ ಶಕ್ತಿಗೆ ಒಳಗಾಗಿ ಮೃತವಾದುದೆಲ್ಲ ಚಿರಂಜೀವವಾಗುತ್ತದೆ. ರಾಮನಪಾದ ಸೋಕಿದೊಡನೆ ಕಲ್ಲು ಹೆಣ್ಣಾದಂತೆ ಪ್ರತಿಭಾಕಿರಣ ಸ್ಪರ್ಶಮಾತ್ರದಿಂದ ಹೆಪ್ಪುಗಟ್ಟಿದಂತೆ ಗಟಿಯಾಗಿರುವ ಎನಿತೆನಿತೊ ಜೀವಿಗಳ ಜಡತ್ವ ಅಳಿಯುತ್ತದೆ. ಹೀಗೆ ಪ್ರತಿಭೆಯ ಕುರಿತಾಗಿ ಕವಿಯಲ್ಲಿರಬಹುದಾದ ಅಲೌಕಿಕ ಶಕ್ತಿಯ ಕಡೆಗೂ ನಮ್ಮ ಗಮನ ಸೆಳೆಯುತ್ತಾರೆ. 'ಕವಿತ್ವಬೀಜಂ ಪ್ರತಿಭಾನಾಂ' ಎಂದು ಪ್ರಾಚೀನ ಅಲಂಕಾರನೊಬ್ಬನು ಕವಿತೆಗೆ ಬೀಜಪ್ರತಿಭೆ ಎಂದಿದ್ದಾನೆ.

ಕುವೆಂಪು ವಿವೇಚಿಸುವ 'ದರ್ಶನ' 'ಪೂರ್ಣದೃಷ್ಟಿ'ಯ ಅಂಶಗಳಲ್ಲಿ "ಪೂರ್ಣದೃಷ್ಟಿಂರ್ಯೇ ನಿಜವಾದ ಸರ್ವೋತ್ಕೃಷ್ಟವಾದ ದರ್ಶನ ಅಂತಹ ದರ್ಶನದಲ್ಲಿ ವಿಜ್ಞಾನ, ರಾಜಕೀಯ, ಮತ, ತತ್ತ್ವ, ಕಲೆ ಎಲ್ಲವೂ ಒಳಗೊಂಡಿರುತ್ತವೆ. ಶ್ರೇಷ್ಠನಾದ ಕವಿಗೆ ಇವುಗಳ ದರ್ಶನವಿರಬೇಕು ಅಂತಹವರು ರಸ ಋಷಿಯಾಗುತ್ತಾರೆ.

ತಮ್ಮ ಕಾವ್ಯ ಪ್ರತಿಭೆಯಿಂದ ಪ್ರಸಿದ್ಧರಾಗಿ 'ರಸಋಷಿ' ಎಂಬ ಕೀರ್ತಿಗೆ ಭಾಜನರಾಗಿರುವ ಕುವೆಂಪುರವರು 'ದೇವರ ಕರುಣೆಯಿಂದಲೇ ಇವೆಲ್ಲ ಸಾಧ್ಯವಾಯಿತು ಎಂದು ಭಾವಿಸುತ್ತಾರೆ. ಇದರಿಂದ ಅವರ ಪ್ರತಿಭೆ ಕಲ್ಪನೆಯ ತತ್ತ್ವದಲ್ಲಿ ದೈವಿಕತೆಯ ಪ್ರಭಾವ ಗಾಢವಾಗಿರುವುದನ್ನು ಕಾಣಬಹುದು.



Scanned by CamScanner

"ನಾನೇ ವೀಣೆ ನೀನೆತಂತಿ

ಅವನೇ ವೈಣಿಕ"

ವೀಣೆಯಾಗಿ ಕವಿ, ಕಾವ್ಯ ತಂತಿಯಾಗಿ ಅದನ್ನು ನುಡಿಸುವ ವೈಣಿಕ ಈ ಸುಂದರವಾದ ಹೋಲಿಕೆಯನ್ನು ಕುವೆಂಪುರವರ ಅನೇಕ ಕವಿತೆಗಳಲ್ಲಿ ಕಾಣಬಹುದು.

'ಕಾವ್ಯವೆಂಬುದು ರಮಣಿಯವಾಗಿ ರಸಪೂರ್ಣವಾದುದು' ಎಂಬುದು ಪ್ರಾಚೀನ ಮೀಮಾಂಸಕರ ಅಭಿಪ್ರಾಯ.

ಸೃಷ್ಟಿ ಭಗವಂತನ ಲೀಲೆಯಿಂದ ನಡೆಯುತ್ತಿರುವುದು, ಸೃಷ್ಟಿಯಲ್ಲಿ ಭಗವಂತನ ಮಹತ್ವದ ಪಾತ್ರದಂತೆ ಕವನದಲ್ಲಿ ಕವಿಯ ಕಾರ್ಯ ಮಹತ್ವದ್ದು ಇದು ಸೃಷ್ಟಿಯಲ್ಲಿ ಭಗವಂತನ ಕಾರ್ಯದಂತೆಯೇ ಎಂಬುದು ಕುವೆಂಪು ವಿಚಾರ.

ಕಾವ್ಯ ಉದಯವಾಗುವ ಪರಿಯನ್ನು 'ರಸಋಷಿ' ಅತ್ಯಂತ ಭಾವಾತ್ಮಕವಾಗಿ ಪರಿಚಯಿಸುತ್ತಾರೆ.

"ಪದಗಳೆಂಬ ಮಣಿಗಳೆಲ್ಲ

ಭಾವವೆಂಬದಾರದಲಿ

ತಮಗೆ ತಾವೆ ಕೋದುಕೊಂಡು

ಕಬ್ಬಮಾಲೆಯಾಗಿ ಮೆರೆಯೆ"

ಹೀಗೆ ಕಾವ್ಯ ಎನ್ನುವುದು ಭಾವವೆಂಬ ದಾರದಲ್ಲಿ ಸುರಿದಿರುವ ಪದಗಳೆಂಬ ಮಣಿಗಳು. ಈ ರೀತಿಯ ಭಾವ, ಕಾವ್ಯ-ದೇಶ-ಕಾಲ ದಿನಗಳನ್ನು ಮೀರಿರುವುದು.

ಕವಿಯ ಕಣ್ಣಿಗೆ ಭಕ್ತಿ, ಮೌನ, ಬೆಳಕು, ಭಾವ, ಧನ, ಕನಕ ಸುಖದುಃಖ ಹೀಗೆ ಎಲ್ಲವೂ ಕವಿತೆಯ ರಚನೆಯಲ್ಲಿ ಅನಾವರಣಗೊಂಡಿದೆ. ಮರಳುಗಾಡಿನಲ್ಲಿ ಪವಿತ್ರಭಾವವುಳ್ಳ ಗಂಗೆ ಹುಟ್ಟಿದಂತೆ ಬೆಂದ ಎದೆಗೆ ತಂಪನ್ನೀಯುವ ಗಾಳಿಯಂತೆಯೇ-

"ಉರಿವ ಮರಳುಗಾಡಿನಲಿ

ಗಂಗೆ ಹುಟ್ಟಿ ಹರಿಯುವಂತೆ

ಕಣ್ಣನಿರಿವ ಕತ್ತಲಲ್ಲಿ

ಮಿಂಚು ಮೂಡಿ ನಿಲ್ಲುವಂತೆ

ಬಿಸಿಲಿನಿಂದ ಬೆಂದ ಎದೆಗೆ

ತಂಪುಗಾಳಿ ಬೀಸುವಂತೆ

ಬಂದೆ ರಮಣಿಯೆ".

ಹೀಗೆ ಕಾವ್ಯವನ್ನು ರಮಣಿ, ರತಿ, ಸುಂದರಿ ಮುಂತಾದ ಹೆಸರುಗಳಿಂದ ಗುರುತಿಸುತ್ತಾರೆ.

ಲೋಕದ ಜನರಿಗೂ ಕವಿಗೂ ಅವಿನಾಭಾವ ಸಂಬಂಧವಿದೆ ಲೋಕಬಿಟ್ಟು ಕವಿಯಲ್ಲ.

"ಜನರಮತವೆ ಕವಿಯ ಮತವು

ಅವರ ಹಿತವೆ ಕವಿಯ ಹಿತವು

ಅವರ ವಾಣಿ ಕವಿಯವಾಣಿ"

ಕವಿಯಾವುದೇ ನಿರ್ದಿಷ್ಟ ಜಾತಿ-ಮತ ಪಂಗಡಗಳಿಗೆ ಸೇರಿರುವುದಿಲ್ಲ. ಕವಿದರ್ಶನದ ಪ್ರಜ್ಞೆ, ಸರ್ವೋದಯ ಸಮನ್ವಯ ಪೂರ್ಣ ದೃಷ್ಟಿಯಾಗಿ ಗೋಚರಿಸುತ್ತದೆ. ಸರ್ವಧರ್ಮಗಳ ಸಮನ್ವಯತೆ ಸರ್ವೋದಯ ಪೂರ್ಣದೃಷ್ಟಿಯಿಂದ ಕವಿಯಾದವನು ತನ್ನ ಆಲೋಚನೆಗಳನ್ನು ಬೆಳೆಸಿಕೊಂಡು ಕಾವ್ಯ ಕಟ್ಟಬೇಕು ಎಂದಿದ್ದಾರೆ. ಕವಿಗಳೆಂದರೆ ಸವಿನುಡಿಯ ಸಿರಿಗುಡಿಯ ಕಟ್ಟುವವರು.

ಕವಿಯ ಕಲ್ಪನಾದೃಷ್ಟಿಗೆ ಬಾನಂಗಳದಲ್ಲಿ ಹಾರಾಡುವ ಹಕ್ಕಿಗಳು ದೇವರು ರುಜು ಮಾಡಿದಂತೆ ಕಾಣುತ್ತದೆ. ಇದರಿಂದ ರಸವಶನಾದ ಕವಿಯು

"ದೇವರು ರಜುಮಾಡಿದನು

ರಸವಶನಾಗುತ ಕವಿ ಅದ ನೋಡಿದನು"

ಎಂದು ಕವಿತೆ ರಚಿಸಿ ರಸವಶನಾಗುವ ಪ್ರಸಂಗವನ್ನು ತುಂಬಾ ಸೊಗಸಾಗಿ ಭಾವ ಪರವಶರಾಗಿ ಹಾಡಿದ್ದಾರೆ.

"ಸೌಂದರ್ಯ ನೋಡುವವರ ಕಣ್ಣಿನಲ್ಲಿದೆ" ಎಂಬ ಮಾತಿನಂತೆಯೇ ಅವರವರ ಮನಸ್ಸು ಗುಣಕ್ಕೆ ಅನುಗುಣವಾಗಿ "ಸೌಂದರ್ಯ" ದರ್ಶಿಸುತ್ತದೆ. ಸೌಂದರ್ಯ ಆರಾಧಕರಾಗಿದ್ದ ಕುವೆಂಪು ಪ್ರಕೃತಿ ಕವಿ ಅವರ ಕವಿತೆಗಳಲ್ಲಿ ಎದ್ದು ಕಾಣುವಂತಹುದು ನಿಸರ್ಗ ಪ್ರೀತಿ, ಪೂರ್ಣ ಸೌಂದರ್ಯ ದೃಷ್ಟಿಯ ಹಲವಾರು ಮುಖಗಳನ್ನು ಅವರ ಕವಿತೆಗಳು ತೆರೆದು ತೋರಿಸಿವೆ.

ಸತ್ಯ, ಶಿವ, ಸುಂದರತೆಯ ಅನ್ಯೋನ್ಯ ಸಂಬಂಧವನ್ನು ಹಾಡಿ ಹೊಗಳುತ್ತಾರೆ.

"ಸತ್ಯಂ ಶಿವಂ ಸುಂದರಂ ಎಂದು

ಹಾಡಿದರು ರಸಋಷಿಗಳೆಲ್ಲ"



Scanned by CamScanner

ಸತ್ಯದಲ್ಲಿ ಶಿವತ್ವ, ಶಿವದಲ್ಲಿ ಸತ್ಯನಾಯಿ ಇವೆರಡು ಸೌಂದರ್ಯದಲ್ಲಿ ಲೀನವಾಗುತ್ತವೆ. ಕವಿಗೆ ಇಲ್ಲಿ ಹೇಳಬೇಕಾಗಿರುವುದೆಂದರೆ ಸೌಂದರ್ಯಾನುಭವದ ದರ್ಶನದಲ್ಲಿ ಕವಿರಸ–ಸತ್ಯಗಳ ದರ್ಶನ ಕಾಣಬಹುದು ಎಂಬುದನ್ನು

**"ಸತ್ಯದಲ್ಲಿ ಶಿವವಿಹುದು| ಶಿವದಲ್ಲಿ ಸತ್ಯವಿದೆ**
**ಮೇಳೆರಡು ಸೌಂದರ್ಯದಲ್ಲಿ ಲೀನವಾಗಿಹವು"**

ಸತ್ಯ ಸೌಂದರ್ಯಗಳ ಮಹತ್ವವನ್ನು ಕವಿ ಹೀಗೆ ಹೇಳುತ್ತಾರೆ

**"ಇಂತಹ ಸುಂದರ ಪ್ರಾತಃ ಕಾಲದಿ**
**ಜೀವಿಸುವುದಕ್ಕಿಂತಲೂ ಬೇರೆ ಗುರಿ**
**ಜೀವಕೆ ಬೇಕಿಲ್ಲ!** ಎಂದಿದ್ದಾರೆ.

ಕವಿ ಸೂರ್ಯನ ಮುಖದಲ್ಲಿ ಶಿವಸ್ಥಾನವನ್ನು ಕಾಣುತ್ತಾರೆ. ಶಿವನಲ್ಲಿಯೇ ಸೌಂದರ್ಯದ ಮೂಲವನ್ನು ಗುರುತಿಸುವ ಇವರು ಇದೇ ಶಾಶ್ವತ ಸೌಂದರ್ಯವೆಂಬುದಾಗಿ ಪರಿ ಭಾವಿಸುತ್ತಾರೆ. ಶಿವತ್ವದಿಂದ ಕೂಡಿಲ್ಲದ ಕಣ್ಣು ನಿರ್ಜೀವವಾದ ನಿಸ್ತೇಜವಾದ ಶವದ ಕಣ್ಣಿನಂತೆಯೇ! ಎಂದು ಹೇಳುವ ಕವಿತೆ–ಹೀಗಿದೆ.

**"ರವಿವದನವೋ ಶಿವಸದನವು**
**ಬರಿ ಕಣ್ಣಾದು ಮಗ್ಳೋ!**
**ಶಿವನಿಲ್ಲದೆ ಸೌಂದರ್ಯವೇ**
**ಶವಮುಖದಾಕಗ್ಳೋ"!**

ಸೊಬಗಿನ ಸುಂದರ ದೃಶ್ಯವನ್ನು ಈ ಪದ್ಯದಲ್ಲಿ ಅನಾವರಣಗೊಳಿಸಿದ್ದಾರೆ.

ಬೇಂದ್ರೆಯವರು ಕೂಡಾ ಬೆಳಗು ಕವಿತೆಯಲ್ಲಿ ಗಿಡಗಂಟಿಗಳ ಕೊರಳೊಳಗಿಂದ ಹಕ್ಕಿಗಳ ಹಾಡು ಕಾಡಿನನಾಡು ಕ್ಷಣಾರ್ಧದಲ್ಲಿ ಗಂದರ್ವರ ಬಿಡಾಯಿತು ಎಂದು ಗಿಡಗಂಟಿಗಳಲ್ಲಿಯೂ ಕವಿ ಜೀವಂತಿಕೆಯನ್ನು ಕಂಡಿದ್ದಾರೆ. ಗಿಡಗಂಟಿಗಳ ಕೊರಳಾಗಿರುವ ಹಕ್ಕಿಗಳಿಂದ ಕಾವ್ಯದ ಹುಟ್ಟಿನ ಕುರಿತಾಗಿ ಹೇಳಿದ್ದಾರೆ.

ಬೇಂದ್ರೆಯವರು ಕವಿ–ಕವನ ಒಂದಕ್ಕೊಂದು ಬೆಸೆದುಕೊಂಡಿದೆ. ಕಾವ್ಯದ ಹುಟ್ಟಿನಲ್ಲಿ ಕವಿಯ ಚಿಂತನೆಗಳ ಫಲವಿದೆ ಎಂದಿದ್ದಾರೆ.

**"ದೇಹವೊಂದು ದೇವ ವೀಣೆ**
**ನರನರವು ತಂತಿತಾನೆ**
**ಹಗಲಿರುಳು ನುಡಿಯುತ್ತಿದೆ**
**ಉಸಿರಾಟವೆ ಗೀತ"**

ಕವಿಗೆ ಗೀತವೇ ಉಸಿರಾಟವಾಗಿದೆ. ದೇಹವೆಂಬುದು ದೇವ ನಿರ್ಮಿತ ವೀಣೆ ದೇಹದಲ್ಲಿರುವ ನರಗಳೆಲ್ಲಾ ಆ ವೀಣೆಯ ತಂತಿ. ಆ ತಂತಿಯನ್ನು ಮಿಡಿದಾಗಲೆಲ್ಲಾ ಗೀತ ಉಸಿರಾಟವಾಗುತ್ತಿದೆ. ಈ ಗೀತದ ಉಸಿರಾಟಕ್ಕೆ ಇಂತಹುದೇ ಕಾರಣ ಬೇಕೆಂದಿಲ್ಲ. ಚಿಂತೆ, ಬೇಸರ, ಇಲ್ಲವೆಂದರೂ ಒಂದು ಹೂತ ಹುಣಿಸಿಮರ ಸಾಕು ಎನ್ನುತ್ತಾರೆ ಬೇಂದ್ರೆ

**"ಕವಿ ಬೇವದ ಬ್ಯಾಸರ ಹರಸಾಕ**
**ಹಾಡಹುಡಿಗಾಕ**
**ಹೆಚ್ಚಿಗೇನು ಬೇಕ?**
**ಒಂದು ಹೂತ ಹುಣಿಸಿಮರ ಸಾಕ"**

ಕವಿಜೀವನದ ಬೇಸರವನ್ನು ಹೊಡೆದೊಡಿಸಲು ನಿರ್ಧಿಷ್ಟವಾದುದೇ ಬೇಕೆನ್ನುವುದಿಲ್ಲ ಒಂದು ಹುಣಸೇಮರ ವಾದರೂ ಸಾಕು ಎನ್ನುತಾರೆ.

ಸ್ವ ಅನುಭೂತಿಯು ಮೈ ತಳೆಯಬೇಕಾದರೆ ಅವಕೆ ಪ್ರತಿಭೆ ಅಗತ್ಯವೆಂಬುದನ್ನು ತಿಳಿಸುತ್ತಾರೆ. ಹೀಗೆ ಪ್ರತಿಭೆಯಿಂದ ಕೂಡಿದ ಸ್ವ ಅನುಭವದಿಂದ

**"ಹಾಡು ಬರಲಿ ರೆಕ್ಕೆಯೊಡೆದು**
**ರಾಗ ಬರಲಿ ಶ್ರುತಿಯ ಒಡೆದು**
**ಭಾವ ಬರಲಿ ದೇಹ ಪಡೆದು**

ಎನ್ನುತ್ತಾರೆ ಕವಿ ಬೇಂದ್ರೆ

ಉತ್ತಮ ಕಾವ್ಯ ಎನಿಸಿಕೊಳ್ಳಬೇಕಾದರೆ ಕವಿ ಪ್ರತಿಭೆಯ ಉತ್ಕಟತೆಯಿಂದ ಕವಿತೆ ಮೂಡಿಬರಬೇಕು ಎನ್ನುತ್ತಾರೆ ಬೇಂದ್ರೆ

**ಹದಾ ಒಳಗ ಇಲ್ಲ ತಮ್ಮಾ**
**ಪದಾ ಹೊರಗ ಬರುದಿಲ್ಲಾ**
**ಕದಾ ತೆರ್ಯೂದಿಲ್ಲ ಅಂತಃಕರಣಾ"**

ಪ್ರತಿಭೆಯೆಂಬ ಹದಾ ಇಲ್ಲದಿದ್ದರೆ ಪದದ ಬಾಗಿಲು ತೆರೆಯುವದಿಲ್ಲ ಎನ್ನುತ್ತಾರೆ.

ಕುವೆಂಪುರವರು ಪಕ್ಷಿಕಾಶಿ ಕವನ ಸಂಕಲನದಲ್ಲಿ 'ಬಾ ಫಾಲ್ಗುಣ ರವಿದರ್ಶನಕೆ' ಎನ್ನುವ ಕವಿತೆಯಲ್ಲಿ ಕವಿಯ ದರ್ಶನ ಕುರಿತಾದ ಕಾತುರವನ್ನು ದಾಖಲಿಸುತ್ತಾರೆ.

**"ಶಿವ ಮಂದಿರ ಸಮ ವನಸುಂದರ**
**ಸುಮಶೃಂಗಾರದ ಗಿರಿಶೃಂಗಕೆ ಬಾ!**
**ಬಾ ಫಾಲ್ಗುಣ ರವಿದರ್ಶನಕೆ"**

ಎಂದು ಅಹ್ವಾನಿಸುತ್ತಾರೆ ಸಹೃದಯರನ್ನು ಸುತ್ತಲಿರುವ ಹಸಿರನಸಿರಿ ಕವಿಯನ್ನು ಕಾವ್ಯಯೋಗದಲ್ಲಿ ತೇಲಿಸುತ್ತದೆ.



Scanned by CamScanner

"ಎತ್ತ ನೋಡಿದರು ಸುತ್ತ ಹಸುರು ಕಡಲ್
ಒತ್ತಿ ಮುತ್ತಿಡುತಲಿಹುದಲ್ಲಿ!
ಇಲ್ಲಿ ಶೃಂಗಾರವಿಲ್ಲಿ ಸೌಂದರ್ಯ
ಎಲ್ಲಿ ರಸಯೋಗ ಸುಖವಿಲ್ಲಿ"!

ಮಲೆನಾಡಿನ ಕಾಡಿನ ಕವಿಯಾಗಿ ಗುರುತಿಸಿಕೊಂಡಿರುವ ಕುವೆಂಪುರವರಿಗೆ ಸಹಜವಾಗಿ ಅಲ್ಲಿನ ಪರಿಸರ ಆಕರ್ಷಿಸಿದೆ. ಆ ಪರಿಸರದ ಮಡಿಲಿನಲ್ಲಿ ರಸಸಿದ್ಧಿ ಪಡೆಯುಲೆತ್ನಿಸುತ್ತಾರೆ.

ಕಾವ್ಯ ಜೀವನದಲ್ಲಿ ನಯನ ಮನೋಹರವಾದ ನವಿಲಿನಂತೆ ಕಾಣಿಸಿಕೊಳ್ಳುತ್ತಿದೆ. ಸಾವಿರಾರು ಕಣ್ಣುಗಳುಳ್ಳ, ಮುಂಗಾರಿನ ಮಳೆಗೆ ತನ್ನ ಗರಿಗೆದರಿ ನರ್ತಿಸುವ ನವಿಲಿನಂತೆಯೇ ಕವಿತೆ ತನ್ನ ಅಭಿವ್ಯಕ್ತಿಯನ್ನು ಹೊಂದುವಲ್ಲಿ ಸ್ಫೂರ್ತಿ ಆವೇಶದಿಂದ ಭಾವೋನ್ಮಾದಕ್ಕೊಳಗಾಗಿ ಕಲ್ಪನೆಯ ಕಣ್ಣುಗಳನ್ನು ತೆರೆದು ಸಂಭ್ರಮಿಸುತ್ತದೆ. ಕವಿ ಈ ಭಾವಗಳನ್ನು ಪದ್ಯದಲ್ಲಿ ಹೀಗೆ ಸೆರೆ ಹಿಡಿದಿದ್ದಾರೆ.

"ಜೀವನದಲ್ಲಿ ಕವನ ಮಯೂರಂ
ನಿಖಿಲ ಭುವನ ಮನ ನಯನ ವಿಹಾರಂ,
ಕಲ್ಪನೆ ಕಣ್ಗಳ ಸಾಸಿರ ನೂರು
ತೆರೆದು ಕುಣಿವುದಾವೇಶದಲಿ
ದಿನ ದಿನ ನಿಶಿ ನಿಶಿ ಮಾಯಾರೂಪನೆ
ಮರೆಯಲು ನವನವ ವೇಷದಲಿ"

ಎಂದು ವ್ಯಕ್ತಪಡಿಸುತ್ತ ಕವಿತೆ ಜನಮನದ ಸುಖಕ್ಕೆ ಸಹಸ್ಪಂದಿಯಾಗಿ ದುಃಖತಾಪಗಳ ಪರಿಹರಿಸುವಲ್ಲಿ ನಿರತವಾಗಿರುತ್ತದೆ. ಲೋಕಕ್ಕೆ ಆನಂದ, ಹರ್ಷವನ್ನೀಯುವಲ್ಲಿ ಸಹಕರಿಸುತ್ತದೆ ಎಂದು ಕವಿ ಪರಿ ಭಾವಿಸುತ್ತಾನೆ.

ಕವಿಯ ಒಳಗಣ್ಣು ಸಾಮಾನ್ಯ ದೃಷ್ಟಿಯನ್ನು ಮೀರಿನಿಂತು, ಅಸಾಮಾನ್ಯವಾದುದನ್ನು ಕಾಣುತ್ತದೆ. ಜಗಕ್ಕೆ ಅಚ್ಚರಿಯೆನ್ನುವ ಸಂಗತಿಯುನ್ನು ಸಾಮಾನ್ಯವಾದ ಮನಸ್ಥಿತಿಯಿಂದ ಇರಿಸಿ ಒಳಗಣ್ಣಿನಿಂದ ದರ್ಶಿಸುತ್ತಾನೆ. ಸಂವೇದನಾಶೀಲವಾಗಿ ಅನುಭವಿಸುವ ಅವಕಾಶ, ಸಾಮರ್ಥ್ಯ ಕವಿಯದು.

ಕವಿಗೂ, ಕಾವ್ಯಕ್ಕೂ ಅಸಾಧ್ಯವೆನಿಸುವುದು ಯಾವುದೂ ಇಲ್ಲ, ಇಲ್ಲಿ ಕಾವ್ಯ ಸತ್ಯ ಭಾವ ಸತ್ಯದಲ್ಲಡಗಿರುವುದೇ ಹೊರತು ವಾಸ್ತವಿಕ ಸತ್ಯವನ್ನು ಹುಡುಕುವುದರಲಿಲ್ಲ. ಇಲ್ಲಿ ನೇಮಿಚಂದ್ರ ಕವಿ ಹೇಳುವ "ಏನಗ್ಗಳವೋ ಕವೀಂದ್ರರಾ" ಎಂಬ ಮಾತು ನೆನಪಿಗೆ ಬರುತ್ತದೆ.

ಕವಿ ಮಾಂತ್ರಿಕ ಆತ ತನ್ನ ಒಲುಮೆಯ ಮಾತಿನಿಂದ ಇಡೀ ವಿಶ್ವ ದರ್ಶನವನ್ನು ಮಾಡಿಸುತ್ತಾನೆ.

ಕವಿ ಪ್ರತಿಭೆಗೆ ದಿವ್ಯದೃಷ್ಟಿ ಇರುತ್ತದೆ ಅಂದರೆ ಒಳಗಣ್ಣು ಅಷ್ಟೇಅಲ್ಲ ಜನ ಸಾಮಾನ್ಯರಿಗಿರುವಂತೆ ಹೊರಗಣ್ಣು ಪ್ರಜ್ಞಾವಂತರಿಗೆ ತಿಳಿಗಣ್ಣು ಇರುತ್ತದೆ.

ಪ್ರಾಚೀನ ಅಲಂಕಾರಿಕನಾದ ಆನಂದವರ್ಧನನು ಕಾವ್ಯ ಸೃಷ್ಟಿಯ ಕುರಿತು–

"ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿ:
ಯಥಾಸ್ಮೈ ರೋಚತೇ ವಿಶ್ವಂ ತಥೇವಂ ಪರಿವರ್ತತೇ"

ಅಪಾರವಾದ ಕಾವ್ಯ ಸಂಸಾರದಲ್ಲಿ ಕವಿಯೇ ಬ್ರಹ್ಮ, ಅವನ ಇಷ್ಟದಂತೆ ಅವನ ಅಭಿರುಚಿಗೆ ತಕ್ಕ ಹಾಗೆ ಇಡೀ ವಿಶ್ವವನ್ನೆ ರೂಪಾಂತರಗೊಳಿಸುವ ಸಾಮರ್ಥ್ಯವಿರುತ್ತದೆ ಎಂದಿದ್ದಾನೆ.

ಸರ್ ಫಿಲಿಪ್ ಸಿಡ್ನಿ ಹೇಳುವಂತೆ "Her world is brazen, poets only deliver a gold" ಇದರ ತಾತ್ಪರ್ಯ ಪ್ರಕೃತಿ ಸೃಷ್ಟಿ ಹಿತ್ತಾಳೆಯದಾದರೆ, ಕವಿ ಅದನ್ನು ಚಿನ್ನವನ್ನಾಗಿಸುತ್ತಾನೆ.

ಕಾವ್ಯ ನಿರ್ಮಾಣ ಲೋಕ ಸೃಷ್ಟಿಯಷ್ಟೇ ಅದ್ಭುತವಾದದ್ದು, ರಮ್ಯವಾದದ್ದು, "ಹೇಳದಿರೆ ತಾಳಲಾರನೋ ಕವಿಯು" ಎಂಬುದು ಕುವೆಂಪು ಅವರ ಮಾತು.

"ನುಡಿದು ಬೇಸತ್ತಾಗ
ದುಡಿದುಡಿದು ಸತ್ತಾಗ
ಜಗಕ ಹಿಗ್ಗಿನ ಹಾಡ ನೀಡಾಂವ"

"ಕವಿಯಲ್ಲಿ ಪಟ್ಟಪಾಡೆಲ್ಲವೂ ಹುಟ್ಟು ಹಾಡಾಗುತ, ರಸವಾಗಿ ಹೊಸದಾಗಿ ಹರಿಯುತ್ತಿವೆ" ಎಂಬ ಬೇಂದ್ರೆಯವರ ಈ ಮಾತುಗಳು ನೇರವಾಗಿ ಕವಿಯನ್ನೇ ಕುರಿತಾಗಿದೆ.

■■



Scanned by CamScanner

RNI Regd. No. KARBIL/2014/54464



ನಾವೆಲ್ಲ ಭಾರತೀಯರೆಂಬ ಭಾವ ಮೂಡಲಿ
ನಮಲ್ಲಿ ಭೇದ-ಭಾವ ಪ್ರಭು ದೂರವಾಗಲಿ
ಒಂದು ತೋಟದಲ್ಲಿ ಹಲವು ಬಣ್ಣದ ಹೂಗಳು
ಅದರಂತೆ ನಮ್ಮ ದೇಶದಲ್ಲಿ ಹಲವು ಮತಗಳು
ಆ ಹೂಗಳಂತೆ ಮತಗಳ ಮಕರಂದ ಬೀರಲಿ
ನಮ್ಮಲ್ಲಿ ಭೇದ-ಭಾವ ಪ್ರಭು ದೂರವಾಗಲಿ
ನಾವು ಮನೆಯ ಕಟ್ಟುವಾಗ ಭೂಮಿ ಜಾತಿ ಕೇಳಿತೇ?
ನಾವು ಶ್ವಾಸ ಎಳೆಯುವಾಗ ಗಾಳಿ ಕುಲವ ಕೇಳಿತೇ?
ಈ ಸೃಷ್ಟಿಯಲ್ಲಿ ಸರ್ವರೂ ಸಮನಾಗಿ ಬಾಳಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ
ಮಣ್ಣಿನಿಂದ ಆದ ಮಡಿಕೆ ಮಣ್ಣಿಗನ್ಯವೇ?
ಚಿನ್ನದಿಂದ ಆದ ಒಡವೆ ಚಿನ್ನಗನ್ಯವೇ?
ನಿನ್ನಿಂದ ಆದ ಜೀವರು ನಿನ್ನಂತೆ ಕಾಣಲಿ
ನಮ್ಮಲ್ಲಿ ಭೇದಭಾವ ಪ್ರಭು ದೂರವಾಗಲಿ

– ಇಬ್ರಾಹೀಮ್ ಸುತಾರ

हम सब भारतीय हैं यह भावना जागृत हो
हे प्रभु, हमारे बीच के भेद-भाव दूर हो
एक ही बाग के रंगबिरंगे फूल,
उसी तरह हमारे देश में हैं अनेक मत
उन फूलों-सा हर मत का मकरंद फैले
हे प्रभु, हमारे बीच के भेद-भाव दूर हो।
हमने घर बनाए तो भूमि ने ज्ञाति पूछी ?
साँस लेते समय हवा ने कुल पूछा ?
इस सृष्टि में सभी समान रूप से जिएँ
हे प्रभु हमारे बीच के भेद-भाव दूर हो।
मिट्टी से बना घडा क्या मिट्टी से अलग है?
सोने से बना जेवर, क्या सोने से भिन्न है?
तुमसे बने जीव तुमसा ही दिखे
हे प्रभु, हमारे बीच के भेद-भाव दूर हे।

- इब्राहीम सुतार

ISSN 2320-0391

**सौम्य प्रकाशन**
'कबीर कुंज' महाबलेश्वर कॉलनी,
दर्गा जेल के सामने,
विजयपुर - ५८६१०३ (कर्नाटक)

**ಸೌಮ್ಯ ಪ್ರಕಾಶನ**
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ,
ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩ (ಕರ್ನಾಟಕ)

Scanned by CamScanner